ಮಾಡಿಕೊಂಡು ಮಿಸ್ಡ್ ಕಾಲ್ ಕೊಟ್ಟು ಕೊಕ್ಕಾಡಿಸಿ ನಗುತ್ತ ಹೊರಟುಹೋದಳು. ನಾನವಳ ನಂಬರ್ ಬ್ಲಾಕ್ ಮಾಡಿಬಿಟ್ಟೆ.

★★★

ಕಾಲೇಜಿನ ಮೊದಲ ದಿನ, 'ನಾನು ಶಾಕ್ ಶಾಕಾಂಬರಿ!' ತಾನಾಗೇ ಬಂದು ನಮ್ಮ ಗುಂಪಿನೊಂದಿಗೆ ಸೇರಿಕೊಂಡಿದ್ದಳು. 'ಬಹುಶಃ ಕೂಸಿದ್ದಾಗ ಹಾಲು ಕುಡಿಯುತ್ತ ಅವಳ ಅಮ್ಮನ ಸೊಂಟಕ್ಕೆ ಚಿವುಟಿ ಚಿವುಟಿ ಶಾಕ್ ಕೊಡುತ್ತಿದ್ದಳೋ ಏನೋ, ಅದಕ್ಕೇ ಇವಳಿಗೆ ಈ ಹೆಸರಿಟ್ಟಿರಬೇಕು. ಇಲ್ಲವಾದರೆ ಈ ಕಾಲದಲ್ಲಿ ಯಾರು ಇಂಥ ಹೆಸರುಗಳನ್ನಿಡುತ್ತಾರೆ' ನನ್ನಷ್ಟಕ್ಕೇ ನಾನು ಯೋಚಿಸಿ ಸುಮ್ಮನಾಗಿದ್ದೆ. ಐದು ಜನ ಒಟ್ಟಿಗೇ ಕುಳಿತುಕೊಳ್ಳುವ ಉದ್ದ ಬೆಂಚುಗಳಲ್ಲಿ ಹೇಗಾದರೂ ಮಾಡಿ ಆಕೆ ನನ್ನ ಬಾಜೂ ಜಾಗ ಗಿಟ್ಟಿಸಿಕೊಂಡಾಗೆಲ್ಲಾ ಪುಟಚೆಂಡಾಗಿ ಬಿಡುತ್ತಿದ್ದಳು. ಮೊದಮೊದಲು ಹೊಸಗೆಳತಿ ಎಂದು ನಾನೂ ಖುಷಿಪಡುತ್ತಿದ್ದೆ ಆದರೆ ಅವಳು ಸ್ವಲ್ಪ ಅತೀ ಅನ್ನಿಸುತ್ತಿದ್ದಂತೆ ಕಸಿವಿಸಿಯಾಗಹತ್ತಿತ್ತು. ನಾನೋ ಮನೆಬಿಟ್ಟು ಕ್ಲಾಸಿಗೆ ಬಂದು ಕುಳಿತರೂ ಬಾಗಿಲು ಹಾಕಿದೆನೋ, ಬೋರ್ವೆಲ್ ಬಟನ್ ಬಂದ್ ಮಾಡಿದೆನೋ, ಹಾಲು ಫ್ರಿಡ್ಜಿನಲ್ಲಿ ಎತ್ತಿಟ್ಟು ಬಂದೆನೋ, ಬೆಲ್ಟ್ ಬಿಚ್ಚಿಕೊಂಡು ಹೋಗಿದ್ದ ಪಂಪ ಮನೆಗೆ ಬಂದನೋ, ಆ ಕುಡುಕ ವಾಚಮನ್ ಚನ್ನಪ್ಪ ಇಪ್ಪತ್ತು ರೂಪಾಯಿ ಕೇಳಿದ್ದನಲ್ಲವಾ, ಮನೋಹರ ಗ್ರಂಥಮಾಲೆಯಲ್ಲಿ ಆ ಪುಸ್ತಕ ಬಂದಿರುತ್ತೋ, ಸಂಪಿನ ನಳ ಬಂದ್ ಮಾಡಿದ್ದೇನೋ ಇಲ್ಲವೋ, ಅರೆ! ಆ ನೀಳಮೂಗಿನ ಆರಡಿ ಎತ್ತರದ ಆ ವ್ಹಾಲಿಬಾಲ್ ಚಾಂಪಿಯನ್ ಈವತ್ತು ಗ್ರೌಂಡಿನಲ್ಲಿ ಕಾಣಲಿಲ್ಲವಲ್ಲ. ಹೀಗೆಲ್ಲ ತಲೆಯೊಳಗೆ ಕೋರಿಹುಳ ಬಿಟ್ಟುಕೊಂಡು ಕುಳಿತುಕೊಳ್ಳುತ್ತಿದ್ದೆನಾದ್ದರಿಂದ ಪಾಠಪ್ರವೇಶಕ್ಕೇ ಹತ್ತು ನಿಮಿಷ ಬೇಕಾಗುತ್ತಿತ್ತು. ಅಷ್ಟಾದ ಮೇಲೆ ಪ್ರೊಫೆಸರ್ ವೆಟ್ಟಿಕಲ್ ಅವರ ಮಲಯಾಳಿ ಉಚ್ಚಾರ ಒಳಗಿಳಿಸಿಕೊಂಡು ನೋಟ್ಸ್ ಬರೆದುಕೊಳ್ಳುವಷ್ಟರಲ್ಲಿ ಜಪೋ ನಾರಾಯಣ ತಪೋ ಪರ್ಯಾಣ.

ಅಂಥದ್ದರಲ್ಲೇ ನಡುನಡುವೆ ಈ ಶಾಕಾಂಬರಿಯ ಹೀರೋಯಿಸಂ ಬೇರೆ. ಆ ದಿನ ಇದ್ದಕ್ಕಿದ್ದಂತೆ ಮೆಲ್ಲಗೆ ಕೈಸವರಿದಳು. ಪಟ್ಟನೆ ಹೊಡೆದೆ. 'ಎಳೀ ಸೌತಿಕಾಯಿ ಇದ್ದಂಗಿಲ್ಲ?' ಪಿಸುಗುಟ್ಟಿದಳು. ಅವಳು ಹೇಳಿದ್ದಕ್ಕಾಗಿ ಮೊದಲ ಸಲ ಅವಳ ಕೈಗಳೆಡೆ ಲಕ್ಷ್ಯ ಹೊರಳಿಸಿಕೊಂಡು, 'ಅಯ್ಯ ಬಲತ್ ಸೊಡರೇರಿದ್ ಹೀರೀಕಾಯಿ, ಹುಡಗೋರಗತೆ ಇಷ್ಟುದ್ದ ಕೂದ್ಲು ಬ್ಯಾರೇ' ಅಂದೆ. ಹಾಗೆ ಹೇಳಿದ್ದು ಸರಿಯಲ್ಲ ಎನ್ನಿಸಿದರೂ, ಹೀಗಾದರೂ ಆಕೆ ಕೋಪಿಸಿಕೊಂಡು ನನ್ನ ಪಕ್ಕ ಕುಳಿತುಕೊಳ್ಳುವುದನ್ನು ಬಿಡಲಿ ಎಂಬ ಇರಾದೆಯಿಂದ ಹೆಚ್ಚೇ ಒರಟುತನ ತೋರಿದೆ. ನಿಜದಲ್ಲಿ ಅವಳ ಕೈಗಳು ಸುಮಾರು ಮೂವತ್ತರ ಹುಡುಗನಂತೆ ಉರುಟುರುಟಾಗಿದ್ದವು. 'ಎಸ್! ನಾನು ಹುಡುಗಾ ಆಗಿದ್ರ ಹೃತಿಕ್ ರೋಷನ್ ಹಂಗ ಜಿಮ್‌ಗೆ ಹೋಗಿ ಬಾಡಿ ಬೀಲ್ಡ್ ಮಾಡ್ತಿದ್ದೆ. ನಿಂಗೊತ್ತು? ಕಹೋನಾ ಪ್ಯಾರ್ ಹೈ ಬಂದಾಗಿಂದ ನಾ ಅವನ್ ಫ್ಯಾನ್ ಆಗೇನಿ. ವೆಂಕಟರಮಣಸ್ವಾಮಿ ಬಾಜೂಕ ದೊಡ್ ಪೋಸ್ಟರ್ ತಂದು ಅಂಟಿಸ್ಗೊಂಡೇನಿ. ಎದ್ ಕೂಡ್ಲೇನೂ ಅವನ... ಮಲಗೂವಾಗೂ ಅವನ...' ಮುಷ್ಟಿ ಬಿಗಿಮಾಡಿ ಕೈಯನ್ನು ಇಂಗ್ಲೀಷಿನ ವಿ ಆಕಾರಕ್ಕೆ ತಂದು ತೋಳು ಸವರಿಕೊಳ್ಳುತ್ತ, 'ನೋಡಲೇ ತತ್ತಿ!' ಎಡಹುಬ್ಬು ಹಾರಿಸಿದಳು. ಬಡೀ ಇದಕ್ ಬಡೀ ಇದಕ್ ಎಂದು ಹಲ್ಲು ಕಚ್ಚಿಹಿಡಿದು ನನ್ನ ಕೈಯಿಂದ ಹೊಡೆಸಿಕೊಂಡಳು. ಅಷ್ಟೊತ್ತಿಗೆ, 'ಹೇಯ್ ಗರ್ಲ್ಸ್, ಸಿಂಬ್ಲಿ ಯೂ ಬೋತ್ ಆರ್ ಡಿಸ್ಟರ್ಬಿಂಗ್!' ತೋರುಬೆರಳಿನಿಂದ ನಮ್ಮನ್ನು ಗುರಿಮಾಡಿ ಕಣ್ಣು ದೊಡ್ಡದು ಮಾಡಿದರು ಪ್ರೊಫೆಸರ್ ವೆಟ್ಟಿಕಲ್. ಕ್ಲಾಸೆಲ್ಲ ಗೊಳ್ ಎಂದಿದ್ದು ಅವರ ಉಚ್ಚಾರಕ್ಕೋ, ನಾವು ಬೈಸಿಕೊಂಡಿದ್ದಕ್ಕೋ... ಅಷ್ಟೊತ್ತಿಂದ ಇಡೀ ಕ್ಲಾಸಿಗೆ ಕ್ಲಾಸೇ ನಮ್ಮನ್ನು ಗಮನಿಸುತ್ತಿತ್ತೇನೋ? ಗಾಬರಿ ಅವಮಾನ ಒಟ್ಟಿಗೇ ಅನ್ನಿಸಿ ಹೊರಬರಲು ನನಗೆ ಒಂದುವಾರವೇ ಬೇಕಾಯಿತು.